Handloom Board.

Q.—571. Sri G. PAPANNA (Sidlaghatta-Chikballapur).—

Will the Government be pleased to state :—

(*a*) the number of handlooms in the State ;

(*b*) the number of looms out of these in which cotton, woollen, silk and artificial silk cloth is being manufactured ;

(*c*) the number of production centres formed through co-operative societies with the aid of Handloom Board ; and the quantity of cloth produced each year in these productive centres ;

(*d*) the number of weavers getting help from this arrangement by becoming members of the co-operative societies ?

A.—Sri H. M. CHANNABASAPPA (Minister for Industries).—

(*a*) 50,922.

(*b*) Wool 7,500

Cotton Silk and Art-silk †43,422

(*c*) 60—Quantity of cloth produced in value during the past two years is given below :—

			Rs.
1953-54	...	...	2,37,536
1954-55	...	...	2,46,258

(*d*) 22,062 handlooms.

ಶ್ರೀ ಜಿ. ಪಾಪಣ್ಣ.—ತಾವು ಇಲ್ಲಿ ಸಂಸ್ಥಾನದಲ್ಲಿ ಇರತಕ್ಕ ಕೈಮಗ್ಗಗಳ ಸಂಖ್ಯೆ 50,922 ಎಂತ ಹೇಳಿ ಇದರಲ್ಲಿ ಕೇವಲ 22,062 ಕೈಮಗ್ಗಗಳವರಿಗೆ ಮಾತ್ರ ಸದಸ್ಯತ್ವವನ್ನು ಕೊಟ್ಟಿದ್ದೀರಿ. ಇನ್ನು ಉಳಿದವರ ಗತಿಯೇನು ? ಅವರಿಗೆ ಈ ಸದಸ್ಯತ್ವ ಕೊಡದಿರುವುದಕ್ಕೆ ಕಾರಣವೇನು ?

* ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ರೀತಿ ಉಳಿದ ಜನರು ಸದಸ್ಯರಾಗಲು ಮುಂದೆ ಬಾರದಿರುವುದೇ ಇದಕ್ಕೆ ಕಾರಣ.

ಶ್ರೀ ಜಿ. ಪಾಪಣ್ಣ.—ಇವರು 2 ಲಕ್ಷ ಚಿಲ್ಲರೆ ರೂಪಾಯಿಗಳ ಬಟ್ಟೆಯನ್ನು ತಯಾರಿಸುತ್ತಿದ್ದಾರೆಂದು ಹೇಳಿದ್ದೀರಿ. ಇದು ಬಹಳ ಕಡಮೆಯಾಗಲಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಅಭಿಪ್ರಾಯದ ಮಾತು.

ಶ್ರೀ ಜಿ. ಪಾಪಣ್ಣ.—ಈ ಕೃತಕ ಬಟ್ಟೆಗಳ ತಯಾರಿಕೆಯಲ್ಲಿ ನೂಲನ್ನು ನೇಯುವ ಕಡೆ ಕೃತಕ ರೇಷ್ಮೆಯನ್ನೂ ಕೃತಕ ರೇಷ್ಮೆಯನ್ನು ನೇಯುವ ಕಡೆ ನೂಲನ್ನೂ ನೇಯುತ್ತಿರುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಆಯಾ ಸಂದರ್ಭದ ಮೇಲೆ ಹೋಗುತ್ತದೆ. ಎಲ್ಲೆಲ್ಲಿ ಅವರಿಗೆ ಅನುಕೂಲವೆಂದು ಕಂಡುಬರುತ್ತದೋ ಅಲ್ಲಲ್ಲಿ ಅವರು ಆ ರೀತಿ ಬದಲಾವಣೆ ಮಾಡುತ್ತಾರೆ.

ಶ್ರೀ ಜಿ. ಪಾಪಣ್ಣ.—ಈ ರೀತಿ ಸಮಯಕ್ಕೆ ತಕ್ಕ ಹಾಗೆ ಅವರು ಬದಲಾವಣೆ ಮಾಡುತ್ತಿರುವುದರಿಂದ ಇದಕ್ಕೆ ಹೆಚ್ಚು ಜನರು ಸದಸ್ಯರಾಗಲು ಒಪ್ಪಲಿಲ್ಲ ಎಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ಹೆಚ್ಚು ಜನರಿಗೆ ಪೇರ್‌ಹೋಲ್ಡರುಗಳಾಗಲು ವ್ಯಾನುಗಳಲ್ಲಿ ಲೌಡ್‌ಸ್ಪೀಕರುಗಳ ಮೂಲಕ ತಿಳಿವಳಿಕೆ ಕೊಡುತ್ತಿದ್ದೇವೆ. ಹಾಗಾದರೂ ಜನರು ಮುಂದೆ ಬಾರದೆ ಹೋದರೆ ನಾವೇನು ಮಾಡುವುದಕ್ಕಾಗುತ್ತದೆ ?

12-30 P.M.

ಶ್ರೀ ಜಿ. ಪಾಪಣ್ಣ.—ಈ ಉತ್ಪನ್ನ ಕೇಂದ್ರಗಳಿಗೆ ಕಾರ್ಯದರ್ಶಿಗಳನ್ನು ಸರ್ಕಾರದವರು ನೇಮಿಸಿದ್ದಾರೋ ಅಥವಾ ಅವರೇ ನೇಮಿಸಿಕೊಂಡಿದ್ದಾರೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವ ಯಾವ ಕೇಂದ್ರಗಳಲ್ಲಿ ಅವರೇ ನೇಮಕಮಾಡಿಕೊಂಡಿದ್ದಾರೆ, ಯಾವ ಯಾವ ಕೇಂದ್ರಗಳಲ್ಲಿ ಸರ್ಕಾರದವರು ನೇಮಕ ಮಾಡಿದ್ದಾರೆ ಎಂಬ ವಿವರ ಈಗ ನಮ್ಮಲ್ಲಿಲ್ಲ.

ಶ್ರೀ ಜಿ. ಪಾಪಣ್ಣ.—ಅನೇಕ ಕೇಂದ್ರಗಳಲ್ಲಿ ಸರಿಯಾದ ಕಾರ್ಯದರ್ಶಿಗಳಿಲ್ಲದೆ ಉತ್ಪನ್ನ ಸರಿಯಾಗಿ ಆಗುತ್ತಿಲ್ಲ ಎಂಬುದು ತಮಗೆ ಗೊತ್ತೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರಿಯಾದ ಕಾರ್ಯದರ್ಶಿಗಳಿಲ್ಲದ ಕಡೆ ಸರಿಯಾಗಿ ಕೆಲಸ ನಡೆಯುವುದಿಲ್ಲ ಎನ್ನುವುದು ಒಪ್ಪಿಕೊಳ್ಳತಕ್ಕ ಮಾತು.

ಶ್ರೀ ಜಿ. ಪಾಪಣ್ಣ.—ಆ ರೀತಿ ಸರಿಯಾದ ಕಾರ್ಯದರ್ಶಿಗಳಿಲ್ಲದ ಕಡೆಗಳಲ್ಲಿ ಸರಿಯಾದ ಕಾರ್ಯದರ್ಶಿಗಳನ್ನು ನೇಮಕಮಾಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಸದ್ಯದಲ್ಲಿ ಎಲ್ಲ ಕಡೆಯೂ ಸಮರ್ಪಕವಾಗಿ ಕೆಲಸಮಾಡುತ್ತಾ ಇದ್ದಾರೆ ಎಂಬುದು ಸರ್ಕಾರದ ಅಭಿಪ್ರಾಯ.

Primary Schools started in Bangalore District.

Q.—32. Sri A. V. NARASIMHA REDDY (Bangalore South).—

Will the Government be pleased to state :—

the number of Primary Schools that have been started in the District of Bangalore during the years 1952 to 1955-56 (talukwar information may be furnished) ?

† It is not possible to give separate figures for looms engaged in the weaving cotton, silk and art-silk fabrics since the weavers go on changing from weaving of silk to art-silk and cotton to art silk and *vice versa*.